# ಪತ್ರಿಕಾ ಪ್ರಕಟಣೆ.

ದಿನಾಂಕ: 31.05.2011 ರಿಂದ 02.06.2011 ರವರೆಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆಯಾ **ಉಪನಿರ್ದೇಶಕರ ಕಛೇರಿ ಹಂತದಲ್ಲಿ** ವರ್ಗಾವಣಾ ಕೌನ್ಸಿಲಿಂಗ್‌ನ್ನು ಆದ್ಯತಾ ಪಟ್ಟಿಯನ್ವಯ ನಡೆಸಲಾಗುವುದು.

ದಿನಾಂಕ: 05.06.2011 ರಿಂದ 08.06.2011 ರವರೆಗೆ ಪ್ರೌಢ ಶಾಲಾ ಶಿಕ್ಷಕರಿಗೆ ವಿಭಾಗ ಮಟ್ಟದಲ್ಲಿ ಈ ಕೆಳಕಂಡ ಪ್ರಾಧಿಕಾರ ಮತ್ತು ಸ್ಥಳದಲ್ಲಿ ವರ್ಗಾವಣಾ ಕೌನ್ಸಿಲಿಂಗ್‌ನ್ನು ಆದ್ಯತಾ ಪಟ್ಟಿಯನ್ವಯ ನಡೆಸಲಾಗುವುದು.

- ✓ ಬೆಂಗಳೂರು ವಿಭಾಗ – ಸಹನಿರ್ದೇಶಕರು, ಶಿಕ್ಷಕರ ಸದನ, ಕೆ.ಜಿ.ರಸ್ತೆ, ಬೆಂಗಳೂರು.
- ✓ ಮೈಸೂರು ವಿಭಾಗ – ಸಹನಿರ್ದೇಶಕರು, ಸಹನಿರ್ದೇಶಕರ ಕಛೇರಿ, ಡಿ.ಸುಬ್ಬಯ್ಯ ರಸ್ತೆ, ಮೈಸೂರು.
- ✓ ಬೆಳಗಾವಿ ವಿಭಾಗ – ಜಂಟಿನಿರ್ದೇಶಕರು (ಆಡಳಿತ), ಅಪರ ಆಯುಕ್ತರ ಕಛೇರಿ, ರೊದ್ದ ರಸ್ತೆ, ಧಾರವಾಡ.
- ✓ ಗುಲ್ಬರ್ಗಾ ವಿಭಾಗ – ಜಂಟಿನಿರ್ದೇಶಕರು (ಆಡಳಿತ), ಅಪರ ಆಯುಕ್ತರ ಕಛೇರಿ, ಐವಾನ್ ಶಾಹಿ ರಸ್ತೆ, ಗುಲ್ಬರ್ಗಾ.

ದಿನಾಂಕ: 10.06.2011 ರಿಂದ 12.06.2011 ರವರೆಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಾಗೂ ದಿನಾಂಕ: 14.06.2011 ರಿಂದ 16.06.2011 ರವರೆಗೆ ಪ್ರೌಢಶಾಲಾ ಶಿಕ್ಷಕರಿಗೆ **ರಾಜ್ಯಮಟ್ಟದ** ವರ್ಗಾವಣಾ ಕೌನ್ಸಿಲಿಂಗ್‌ನ್ನು ಆದ್ಯತಾ ಪಟ್ಟಿಯನ್ವಯ ನಡೆಸಲಾಗುವುದು. ಶಿಕ್ಷಕರು ಯಾವ ವಿಭಾಗದ ಜಿಲ್ಲೆಗೆ ವರ್ಗಾವಣೆ ಕೋರಿರುತ್ತಾರೋ ಆ ವಿಭಾಗದ ಈ ಕೆಳಕಂಡ ಸ್ಥಳದಲ್ಲಿ ವರ್ಗಾವಣೆ ಪ್ರಾಧಿಕಾರದ (ನಿರ್ದೇಶಕರ) ಮುಂದೆ ಕೌನ್ಸಿಲಿಂಗ್‌ಗೆ ಹಾಜರಾಗುವುದು.

- ✓ ಬೆಂಗಳೂರು ವಿಭಾಗಕ್ಕೆ, ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)– ಶಿಕ್ಷಕರ ಸದನ, ಕೆ.ಜಿ.ರಸ್ತೆ, ಬೆಂಗಳೂರು.
- ✓ ಮೈಸೂರು ವಿಭಾಗಕ್ಕೆ ನಿರ್ದೇಶಕರು(ಪ್ರೌಢಶಿಕ್ಷಣ)– ಸಹನಿರ್ದೇಶಕರ ಕಛೇರಿ, ಡಿ.ಸುಬ್ಬಯ್ಯ ರಸ್ತೆ, ಮೈಸೂರು.
- ✓ ಬೆಳಗಾವಿ ವಿಭಾಗಕ್ಕೆ ನಿರ್ದೇಶಕರು– ಅಪರ ಆಯುಕ್ತರ ಕಛೇರಿ, ರೊದ್ದ ರಸ್ತೆ, ಧಾರವಾಡ.
- ✓ ಗುಲ್ಬರ್ಗಾ ವಿಭಾಗಕ್ಕೆ ನಿರ್ದೇಶಕರು – ಅಪರ ಆಯುಕ್ತರ ಕಛೇರಿ, ಐವಾನ್ ಶಾಹಿ ರಸ್ತೆ, ಗುಲ್ಬರ್ಗಾ.

ಆಯಾ ವರ್ಗಾವಣಾ ಪ್ರಾಧಿಕಾರಿಗಳು ನಿಗದಿತ ದಿನಾಂಕದಂದು ಹಾಜರಾಗಬೇಕಾದ ಅಭ್ಯರ್ಥಿಗಳ ಆದ್ಯತಾ ಪಟ್ಟಿಯ ಕ್ರಮಸಂಖ್ಯೆಯನ್ನು ಆಯಾ ಪ್ರಾಧಿಕಾರಿ ಸ್ಥಳದ ಸೂಚನಾ ಫಲಕ ಮತ್ತು ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗುತ್ತದೆ.

**ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ, ಶಿಕ್ಷಕರು ವಗಾವಣಾ ಅರ್ಜಿ ಸಲ್ಲಿಸುವಾಗ ಕೋರಿರುವ ಆದ್ಯತೆಯನ್ನು ಪರಿಗಣಿಸಿ ಆದ್ಯತಾ ಪಟ್ಟಿ ಸಿದ್ದಪಡಿಸಿ ಆಯಾ ವರ್ಗಾವಣಾ ಪ್ರಾಧಿಕಾರದ ಸೂಚನಾ ಫಲಕದಲ್ಲಿ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಶಿಕ್ಷಕರು ಕೌನ್ಸಿಲಿಂಗ್‌ಗೆ ಹಾಜರಾಗುವಾಗ ಆದ್ಯತೆಯನ್ನು ಪುಷ್ಟೀಕರಿಸುವ ದಾಖಲೆಗಳನ್ನು ತಪ್ಪದೆ ವರ್ಗಾವಣಾ ಪ್ರಾಧಿಕಾರಕ್ಕೆ ಹಾಜರುಪಡಿಸುವುದು. ತಪ್ಪಿದಲ್ಲಿ ಶಿಕ್ಷಕರು ವರ್ಗಾವಣಾ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಅನರ್ಹರಾಗುತ್ತಾರೆ. ಬೇರೆ ಯಾವುದೇ ಆದ್ಯತಾ ಗುಂಪಿನಲ್ಲಿ ಹೆಸರುಗಳನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ.**

(ಎ.ದೇವಪ್ರಕಾಶ್)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

(ಕೆ.ಪಿ.ಹನುಮಂತರಾಯಪ್ಪ)
ನಿರ್ದೇಶಕರು (ಪ್ರೌಢಶಿಕ್ಷಣ)

\\3-server\Typing3\E\EST4\Mamatha\LOKESH\Transfer-2011.doc